ಮೂಲದಾವೆಯಲ್ಲಿ ಡಿಕ್ರಿ

ಮೂಲ ದಾವಾ ದಾಖಲು ದಿನಾಂಕಃ 06-03-2019
ಮೂಲ ದಾವಾ ನಿಖಾಲೆ ದಿನಾಂಕಃ : 27-02-2023

# ಸಿವಿಲ್ ನ್ಯಾಯಾಧೀಶರು, ಅಂಕೋಲಾರವರ ನ್ಯಾಯಾಲಯದಲ್ಲಿ

## ಮೂಲ ದಾವಾ ನಂ. 28/2019

ಶ್ರೀ ತಿಮ್ಮಣ್ಣ ತಂದೆ ಗೋವಿಂದ ನಾಯಕ ಗಾಂವಕರ,
ಅಜಮಾಸು ಪ್ರಾಯಃ 76 ವರ್ಷ,
ಉದ್ಯೋಗಃ ನಿವೃತ್ತ ಶಿಕ್ಷಕ ಹಾಗೂ ರೈತಾಬಿ
ಸಾಕೀನ ಮತ್ತು ಪೋಸ್ಟ : ಬೆಲೇಕೇರಿ,
ತಾಲೂಕುಃ ಅಂಕೋಲಾ, ಉತ್ತರ ಕನ್ನಡ ಜಿಲ್ಲೆ ……ವಾದಿ

– ವಿರುದ್ಧ –

1. ಶ್ರೀ ಬೀರಣ್ಣ ತಂದೆ ಅನಂತ ಗಾಂವಕರ,
   ಅಜಮಾಸು ಪ್ರಾಯಃ 55 ವರ್ಷ, ಉದ್ಯೋಗಃ ರೈತಾಬಿ,
   ಸಾಕೀನ ಮತ್ತು ಪೋಸ್ಟ್ಃ ಬೇಲೇಕೇರಿ,
   ತಾಃ ಅಂಕೋಲಾ, ಉತ್ತರ ಕನ್ನಡ ಜಿಲ್ಲೆ

2. ಶ್ರೀ ಹಮ್ಮಣ್ಣ ತಂದೆ ಶಿವಪ್ಪ ನಾಯ್ಕು,
   ಅಜಮಾಸು ಪ್ರಾಯಃ 50 ವರ್ಷ, ಉದ್ಯೋಗಃ ರೈತಾಬಿ,

3. ಶ್ರೀಮತಿ ದೇವಮ್ಮ ಕೋಂ ನಾರಾಯಣ ನಾಯ್ಕ,
   ಅಜಮಾಸು ಪ್ರಾಯಃ 70 ವರ್ಷ, ಉದ್ಯೋಗಃ ಮನೆವಾರ್ತೆ ಕೆಲಸ,

4. ಶ್ರೀಮತಿ ಹನಮು ತಂದೆ ಶಿವಪ್ಪ ನಾಯ್ಕ,
   ಅಜಮಾಸು ಪ್ರಾಯಃ 52 ವರ್ಷ, ಉದ್ಯೋಗಃ ಮನೆವಾರ್ತೆ ಕೆಲಸ,

5. ಶ್ರೀಮತಿ ಬೇಬಿ ತಂದೆ ಶಿವಪ್ಪ ನಾಯ್ಕ,
   ಅಜಮಾಸು ಪ್ರಾಯಃ 50 ವರ್ಷ, ಉದ್ಯೋಗಃ ಮನೆವಾರ್ತೆ ಕೆಲಸ,

2 ರಿಂದ 5 ನೇಯವರು ಸಾಕೀನಃ ಶೀಳ್ಯಾ,
ಪೋಸ್ಟ್ಃ ಬಾಸಗೋಡ,
ತಾಃ ಅಂಕೋಲಾ, ಉತ್ತರ ಕನ್ನಡ ಜಿಲ್ಲೆ ... .... ಪ್ರತಿವಾದಿಯರು

**ದಾವಾ ಆಕಾರಃ ರೂ.1,000/–**
**ದಾವಾ ಸ್ವರೂಪಃ ದಾವೆಯ ಮಾಗಣಿ, ನಿರ್ದೇಶನಾತ್ಮಕ ಮನಾಯಿ ಹಾಗೂ ಕೋರ್ಟ ಖರ್ಚು ಕೇಳಿ**

ವಾದಿಯು ಮಾನ್ಯ ನ್ಯಾಯಾಲಯದಲ್ಲಿ ಪ್ರತಿವಾದಿಯರ ವಿರುದ್ಧ ದಾವಾಸ್ತಿಯ ಅಂಚಿಗಿರುವ ಪ್ರತಿವಾದಿಯ ಆಸ್ತಿಯಲ್ಲಿರುವ ತೆಂಗಿನ ಮರಗಳನ್ನು ಕಡಿದು ಖುಲ್ಲಾಪಡಿಸಲು ಹಾಗೂ ಅಡಿಕೆ ಮರಗಳ ಕುರಿತು ಸುರಕ್ಷತಾ ಕ್ರಮ ಕೈಗೊಳ್ಳುವಂತೆ ಪ್ರತಿವಾದಿಯರ ವಿರುದ್ಧ ನಿರ್ದೇಶನಾತ್ಮಕ ನಿರ್ಬಂಧಕಾಜ್ಞೆ ನೀಡಲು ಹಾಗೂ ಕೋರ್ಟ ಖರ್ಚು ಕೇಳಿ ಪ್ರಸ್ತುತ ದಾವೆ ಸಲ್ಲಿಸಿರುತ್ತಾರೆ.

ಪ್ರಸ್ತುತ ಮೂಲದಾವೆಯು ಈ ದಿನ ಅಂತಿಮ ತೀರ್ಮಾನಕ್ಕಾಗಿ ಶ್ರೀ ಪ್ರಶಾಂತ ಬಾದವಾಡಗಿ, ಬಿ.ಎ.., ಎಲ್.ಎಲ್.ಬಿ. (ಸ್ಪೇಷಲ್), ಸಿವಿಲ್ ಜಡ್ಜ್ ಅಂಕೋಲಾರವರ ಸಮ್ಮುಖದಲ್ಲಿ ಬಂದಿದ್ದು, ವಾದಿ ಪರ ಶ್ರೀ ಎನ್.ಎಸ್.ನಾಯ್ಕ ವಕೀಲರು ಉಪಸ್ಥಿತರಿದ್ದರು ಮತ್ತು 1 ನೇ ಪ್ರತಿವಾದಿಯ ಪರವಾಗಿ ಶ್ರೀ ಎಸ್. ಹೆಚ್. ನಾಯಕ ವಕೀಲರು, 2 ರಿಂದ 5 ನೇ ಪ್ರತಿವಾದಿಯರು ಏಕಪಕ್ಷೀಯರು,

# It is ordered and decreed that:-

ವಾದಿಯ ದಾವೆಯನ್ನು ಖರ್ಚು ಸಹಿತ ಭಾಗಶಃ ಡಿಕ್ರಿ ಮಾಡಲಾಗಿದೆ.

ದಾವಾಸ್ತಿಯ ಉತ್ತರದ ಗಡಿಗುಂಟ ಪ್ರತಿವಾದಿಯರ ಆಸ್ತಿಯಲ್ಲಿಯ ಮೂರು ತೆಂಗಿನ ಮರಗಳ ಕಾಯಿ, ತೆಂಗಿನ ಹೆಡೆ ಮತ್ತು ಎಳೆಯ ಮಿಳ್ಳೆಗಳು ಹಾಗೂ 8 ಅಡಿಕೆ

ಮರಗಳ ಹೆಡೆಗಳು ಮತ್ತು ಇತರ ವಸ್ತುಗಳು ದಾವಾಸ್ತಿಯಲ್ಲಿರುವ ಹಂಚಿನ ಮನೆಯ ಮೇಲೆ ಬೀಳದಂತೆ ಹಾಗೂ ಜೋರಾಗಿ ಬೀಸುವ ಗಾಳಿ ಮಳೆಗೆ ದಾವಾಸ್ತಿಯಲ್ಲಿರುವ ಮನೆಯ ಮೇಲೆ ಮುರಿದು ಬೀಳದಂತೆ ಸುರಕ್ಷತಾ ಕ್ರಮಗಳನ್ನು ದಾವೆ ಡಿಕ್ರಿಯಾದ ಒಂದು ತಿಂಗಳೊಳಗಾಗಿ ಕೈಗೊಳ್ಳುವಂತೆ ಈ ಮೂಲಕ ನಿರ್ದೇಶನಾತ್ಮಕ ಮನಾಯಿ ಆದೇಶವನ್ನು ಪ್ರತಿವಾದಿಯರ ವಿರುದ್ಧ ಮಾಡಲಾಗಿದೆ.

ಇದಕ್ಕೆ ಇಂದು ದಿನಾಂಕಃ 27 ನೇ ಫೆಬ್ರವರಿ 2023 ರಂದು ನನ್ನ ಸಹಿ ಹಾಗೂ ಕೋರ್ಟ ಮೊಹರ್ ಮಾಡಿಕೊಡಲ್ಪಟ್ಟಿತು.

**ಸಿವಿಲ್ ಜಡ್ಜ, ಅಂಕೋಲಾ.**

## ದಾವಾ ಆಸ್ತಿ ತಪಶೀಲು

ಅಂಕೋಲಾ ತಾಲೂಕೂ ಪೈಕಿ ಬೇಲೆಕೇರಿ , ಗ್ರಾಮದ ಜಮೀನು ಸರ್ವೆ ನಂ .11 ಹಿಸ್ಸಾ 6, ಕ್ಷೇತ್ರ 0-01-12, ಆಕಾರ ರೂ. 0.03 ಹಾಗೂ ಸದ್ರಿ ಜಮೀನಿನಲ್ಲಿದ್ದ ಹಾಗೂ ಬೇಲೆಕೇರಿ ಗ್ರಾಮ ಪಂಚಾಯತ ಇದರ ಇಮಾರತ ಕರಾಕರಣೆ ನಂ. 29 ನೇ ತಪಶೀಲಿಗೆ ಒಪ್ಪಿದ ವಾದಿ ಹಾಗೂ ವಾದಿಯ ಕುಟುಂಬದ ಸದಸ್ಯರುಗಳು ವಾಸಿಸುತ್ತಿದ ಮನೆ.

ಚೌತರ್ಪಣಾ ಚೆಕ ಬಂಧಿಗಳುಃ-

ಉತ್ತರಕ್ಕೆ : ಸರ್ವೆ ನಂ.9 ಹಿಸ್ಸಾ6 ನೇದರ ಗಡಿ
ಪಶ್ಚಿಮಕ್ಕೆ : ಸರ್ವೆ ನಂ.11 ಹಿಸ್ಸಾ5 ನೇದರ ಗಡಿ
ದಕ್ಷಿಣಕ್ಕೆ : ಸರ್ವೆ ನಂ.11 ಹಿಸ್ಸಾ6 ನೇದರ ಗಡಿ
ಪೂರ್ವಕ್ಕೆ : ಕಾಲುದಾರಿ ಇದೆ.

## <u>ವ್ಯಾಜ್ಯದಲ್ಲಾದ ಖರ್ಚಿನ ವಿವರ</u>

| ನಂ. | ವಿವರ | ವಾದಿಯಿಂದ ರೂ. | 1 ನೇ ಪ್ರತಿವಾದಿಯಿಂದ ರೂ. | 2 ರಿಂದ 5 ನೇ ಪ್ರತಿವಾದಿಯರುಯಿಂದ ರೂ. |
|---|---|---|---|---|
| 1 | ಮೂಲದಾವಾ ಕೋರ್ಟ ಫೀ | 25-00 | --- | --- |
| 2 | ಪ್ರೊಸೆಸ ಫೀ | 56-00 | --- | --- |
| 3 | ನಕಲು ಫೀ | 2-00 | --- | --- |
| 4 | ವಕೀಲರ ಫೀ | -- ಫೀ ಸರ್ಟಿಪಿಕೇಟ ನೀಡಿರುವುದಿಲ್ಲ | --- | --- |
| | **ಒಟ್ಟೂ** | 83-00 | --- | --- |

ಡಿಕ್ರಿ ತಯಾರಿಸಿದ ಮತ್ತು ಪ್ರಕಟಿಸಿದ ದಿನಾಂಕಃ 02-03-2023
ಡಿಕ್ರಿಗೆ ಸಹಿ ಮಾಡಿದ ದಿನಾಂಕಃ 04-03-2023

ತಯಾರಿಸಿದೆ. ಪರೀಕ್ಷಿಸಿದೆ. ಪರಿಶೀಲಿಸಿದೆ

ಡಿಕ್ರಿ ಸಹಾಯಕ ಶಿರಸ್ತೇದಾರ(ಆಡಳಿತ) ಸಿವಿಲ್ ಜಡ್ಜ, ಅಂಕೋಲಾ

( ಶ್ರೀ ಎನ್.ಎಸ್.ನಾಯ್ಕ )
ವಾದಿ ಪರ ವಕೀಲರು

( ಶ್ರೀ ಎಸ್. ಹೆಚ್. ನಾಯಕ)
1 ನೇ ಪ್ರತಿವಾದಿ ಪರ ವಕೀಲರು

2 ರಿಂದ 5 ನೇ ಪ್ರತಿವಾದಿಯರು ಏಕಪಕ್ಷೀಯರು.

***<u>Note :</u>***

***Valuation slip has been enclosed herewith as per Hon'ble High Court of Karnataka, Bangalore, circular No. 1/2004 dated 23-11-2004.***